## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | :: | 177 |
| ಸದಸ್ಯರ ಹೆಸರು | :: | ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | :: | 05.07.2023 |
| ಉತ್ತರಿಸುವ ಸಚಿವರು | :: | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಹೊಸಪೇಟೆ ತಾಲ್ಲೂಕು ಕಛೇರಿಯಲ್ಲಿ ನಕಲಿ ದಾಖಲೆ ಸೃಷ್ಟಿಸಿ ಭೂ ಮಂಜೂರಾತಿಗಾಗಿ ಅರ್ಜಿ ಸಲ್ಲಿಕೆ ಮಾಡಿರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿ ಅರ್ಜಿ ಸಲ್ಲಿಸಿರುವವರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು: (ಮಾಹಿತಿ ನೀಡುವುದು) | 1. ಹೊಸಪೇಟೆ ತಾಲ್ಲೂಕು ಕಛೇರಿಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ. ಆದರೆ, ನಗರಸಭೆ ವ್ಯಾಪ್ತಿಗೆ ಒಳಪಡುವ ಹೊಸಪೇಟೆ ತಾಲ್ಲೂಕು, ಸಂಕಲಾಪುರ ಗ್ರಾಮದ ಸರ್ವೆ ನಂ:148 ರ ಒಟ್ಟು ವಿಸ್ತೀರ್ಣ:2.17 ಎಕರೆ ಜಮೀನು ಹಾಗೂ ಹೊಸಪೇಟೆ ತಾಲ್ಲೂಕು, ಹೊಸಪೇಟೆ ಗ್ರಾಮದ ಸರ್ವೆ ನಂ:302/ಬಿ ರ ಒಟ್ಟು ವಿಸ್ತೀರ್ಣ:3.49 ಎಕರೆ ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದು, ಪೌರಾಯುಕ್ತರು, ನಗರಸಭೆ ಹೊಸಪೇಟೆ ಇವರಿಂದ ನಮೂನೆ-3 ಖಾತೆಗಳನ್ನು ನೀಡಿರುವ ಕುರಿತು ವರದಿಯನ್ನು ಸಲ್ಲಿಸಲಾಗಿರುತ್ತದೆ.<br><br>2. ಮುಂದುವರೆದು, ಆಯುಕ್ತರು, ನಗರಸಭೆ ಹೊಸಪೇಟೆ ಹಾಗೂ ತಹಶೀಲ್ದಾರರು, ಹೊಸಪೇಟೆ ಇವರು ಸದರಿ ಜಮೀನುಗಳನ್ನು ಸ್ಥಾನಿಕ ಪರಿಶೀಲನೆ ಮಾಡಿ ಸದರಿ ಸರ್ಕಾರಿ ಜಮೀನಿನಲ್ಲಿ ಈ ಕೆಳಕಂಡ ವ್ಯಕ್ತಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ ಹಕ್ಕು ದಾಖಲೆಗಳನ್ನು ಪಡೆದು, ಅಕ್ರಮ ಖಾತೆಗಳನ್ನು ಮಾಡಿಕೊಂಡು ಜಮೀನಿನಲ್ಲಿ ತಳಪಾಯ ನಿರ್ಮಿಸಿಕೊಂಡಿರುತ್ತಾರೆ. |

| ಕ್ರ. ಸಂ | ಅಕ್ರಮ ಖಾತೆದಾರರ ಹೆಸರು | ಡೋರ್. ನಂ | ನಿರ್ಧರಣಾ ಸಂಖ್ಯೆ |
|---|---|---|---|
| 1 | ಮಲ್ಲಿಕಾರ್ಜುನ ತಂದೆ ಜಿ ಸುಡಗಾಡೆಪ್ಪ | - | 02 |
| 2 | ಡಿ.ವೇಣುಗೋಪಾಲ ತಂದೆ ಡಿ ಹನುಮಂತಪ್ಪ | 1381 | 1381 |
| 3 | ಜೇಟ್ ರಾಮ್ | - | - |
| 4 | ಟಿ ಸೋಮಪ್ಪ ತಂದೆ ಮಲಿಯಪ್ಪ | - | 1158ಎ/2 |

| | | | |
|---|---|---|---|
| 5 | ಕೆ ಗಂಗಾಧರ ತಂದೆ ಯಲ್ಲಪ್ಪ | 1404 | 1404 |
| 6 | ಬೆಳಗೋಡು ಅಂಬಣ್ಣ ತಂದೆ ಬಿ ಸಣ್ಣಕಪ್ಪ | 41 | 41 |
| 7 | ಗಣೇಶ ತಂದೆ ಯಮುನಪ್ಪ | 27 | 27 |
| 8 | ತಾಯಪ್ಪ ತಂದೆ ದೊಡ್ಡ ಮಲಿಯಪ್ಪ | 03 | 03 |
| 9 | ಡಿ. ಪಾರ್ವತಮ್ಮ ತಂದೆ ಡಿ ಹನುಮಂತಪ್ಪ | 02 | 02 |
| 10 | ಗೋವಿಂದಮ್ಮ ತಂದೆ ಹನುಮಂತಪ್ಪ | 01 | 01 |

3. ಸದರಿ ಪ್ರಕರಣದಲ್ಲಿ ಆಪಾದಿತರಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಈ ಮೇಲಿನಂತೆ ಹಕ್ಕು ದಾಖಲೆ ಪಡೆದವರ ಮೇಲೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 192 ಎ ರನ್ವಯ ಪ್ರಕರಣವನ್ನು ದಾಖಲಿಸಿ ಹಾಗೂ ಪ್ರಥಮ ವರ್ತಮಾನ ವರದಿಯ ಪ್ರತಿಯೊಂದಿಗೆ ವರದಿ ಸಲ್ಲಿಸಲು ಕಂದಾಯ ನಿರೀಕ್ಷಕರು, ಹೊಸಪೇಟೆ ಇವರಿಗೆ ಮಾನ್ಯ ಜಿಲ್ಲಾಧಿಕಾರಿಗಳು, ದಿನಾಂಕ:24-05-2022 ರಂದು ಆದೇಶ ನೀಡಿರುತ್ತಾರೆ.
4. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳ ವಿರುದ್ಧ ದಿನಾಂಕ:24-05-2022 ರಂದು ಪಟ್ಟಣ ಪೊಲೀಸ್ ಠಾಣೆಯಲ್ಲಿ ಸಂಖ್ಯೆ-0074 ರಲ್ಲಿ F.I.R ದಾಖಲಿಸಲಾಗಿದ್ದು ಹಾಗೂ ಆಪಾದಿತರ ಮೇಲೆ ವಿರುದ್ಧ ದಿನಾಂಕ: 24-05-2022 ರಂದು ಪಟ್ಟಣ ಪೊಲೀಸ್ ಠಾಣೆಯಲ್ಲಿ ಸಂಖ್ಯೆ-0072 ರಲ್ಲಿ F.I.R ದಾಖಲಿಸಲಾಗಿರುತ್ತದೆ.

| ಕ್ರ. ಸಂ | ಸಿಬ್ಬಂದಿಯ ಹೆಸರು | ಪದನಾಮ ಹಾಗೂ ಕಾರ್ಯ ನಿರ್ವಹಿಸಲಾಗಿದ್ದ ಸ್ಥಳ | ಷರಾ |
|---|---|---|---|
| 1 | ಎಸ್. ಸುರೇಶ್ | ಹಿಂದಿನ ವಿಷಯ ನಿರ್ವಾಹಕರು ಹಾಗೂ ದ್ವಿದ.ಸ ನಗರಸಭೆ ಹೊಸಪೇಟೆ | ದಿನಾಂಕ:25-05-2022 ರಂದು ಮಾನ್ಯ ಜಿಲ್ಲಾಧಿಕಾರಿಗಳು ಸದರಿ ಪ್ರಕರಣದಲ್ಲಿ ತಪ್ಪಿತಸ್ಥ ನಗರಸಭೆ ಹೊಸಪೇಟೆ ಕಛೇರಿಯ ಸಿಬ್ಬಂದಿಗಳ ವಿರುದ್ಧ ಕರ್ನಾಟಕ ಸರ್ಕಾರಿ |

| | | | | | | |
|---|---|---|---|---|---|---|
| | | | 2 | ಜಿ. ನೀಲಕಂಠಸ್ವಾಮಿ | ಹಿಂದಿನ ಪ್ರಭಾರೆ ಕರವಸೂಲಿಗಾರರು ಹಾಗೂ ಕಂದಾಯ ನಿರೀಕ್ಷಕರು ಹಾಗೂ ಹಾಲಿ ಹಿರಿಯ ವಾಲ್ ಮ್ಯಾನ್ ಪುರಸಭೆ , ಹಡಗಲಿ | ಸೇವಾ ನಿಯಮಗಳು 1957 ರ ನಿಯಮ 10(1) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಮಾನತ್ತು ಮಾಡಿ ಆದೇಶಿಸಲಾಗಿರುತ್ತದೆ.<br><br>ದಿನಾಂಕ:03-06-2023 ರಂದು ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ ಇವರು ಸದರಿ ನೌಕರರ ಲೀನ್ ನೀಡಿ ಖಾಲಿಯಿರುವ ಹುದ್ದೆಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ. |
| | | | 3 | ರಮೇಶ್ .ಕೆ | ಪ್ರಭಾರೆ ಕರವಸೂಲಿಗಾರರು ಹಾಗೂ ವಾಲ್ ಮ್ಯಾನ್ ಹೊಸಪೇಟೆ | ದಿನಾಂಕ:01-06-2023 ರಂದು ಜಿಲ್ಲಾಧಿಕಾರಿಗಳು, ವಿಜಯನಗರ ಇವರ ವಿರುದ್ಧ ದೋಷಾರೋಪಣೆಗಳ ಸತ್ಯಾಂಶ ಪರಿಶೋಧನೆಗಾಗಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957 ನಿಯಮ 11(2) ರಂತೆ ಇಲಾಖಾ ವಿಚಾರಣೆಯನ್ನು ಜರುಗಿಸಲು ಮಾನ್ಯ ಸಹಾಯಕ ಆಯುಕ್ತರು, ಹೊಸಪೇಟೆ ರವರನ್ನು ವಿಚಾರಣಾಧಿಕಾರಿ ಆಗಿ ಹಾಗೂ ತಹಶೀಲ್ದಾರರು ಗ್ರೇಡ್ -2, ತಾಲ್ಲೂಕು ಕಛೇರಿ ಹೊಸಪೇಟೆ ಇವರನ್ನು ಮೇಲ್ಕಂಡ 11(5) (ಸಿ) ರನ್ವಯ ಶಿಸ್ತು ಪ್ರಾಧಿಕಾರ ಪರವಾಗಿ ಪ್ರಕರಣವನ್ನು ಮಂಡಿಸಲು ಮಂಡನಾಧಿಕಾರಿಗಳನ್ನಾಗಿ ನೇಮಿಸಿದೆ. ಇಲಾಖಾ ವಿಚಾರಣೆ ನಡೆಸಿ 04 ತಿಂಗಳೊಳಗಾಗಿ ವಿಚಾರಣಾ ವರದಿಯನ್ನು ಸಲ್ಲಿಸಲು ಆದೇಶಿಸಲಾಗಿರುತ್ತದೆ. ಹಾಲಿಯಾಗಿ ಸದರಿ ಪ್ರಕರಣದಲ್ಲಿ ವಿಚಾರಣೆ ಮಾಡಲು ಬಾಕಿ ಇರುತ್ತದೆ. |
| | | | 4 | ಮಂಜುನಾಥ | ಪ್ರ.ದ.ಸ, ನಗರಸಭೆ | ದಿನಾಂಕ:25-10-2022 ರಂದು |

| | | |
|---|---|---|
| | ಪೋಲೀಸ್ ದೂರನ್ನು ನೀಡಲಾಗಿದೆಯೇ: ನೀಡಿದ್ದಲ್ಲಿ ಅದರ ಮಾಹಿತಿ ವಿವರ ನೀಡುವುದು: | ಕಛೇರಿಯಲ್ಲಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿದ್ದು (form-3) ನೀಡಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ಆರೋಪಿಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಈ ಮೇಲಿನಂತೆ ಹಕ್ಕು ದಾಖಲೆ ಪಡೆದವರ ಮೇಲೆ ಹಾಗೂ ಇದಕ್ಕೆ ಸಹಕರಿಸಿದ ಅಧಿಕಾರಿಗಳ ಮೇಲೆ ಎಫ್.ಐ.ಆರ್-0068/2022 ನ್ನು ದಾಖಲಿಸಿ ದೂರು ನೀಡಲಾಗಿರುತ್ತದೆ. |
| ಇ | ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿ ಸರ್ಕಾರಿ ಜಾಗಗಳನ್ನು ಕಬಳಿಸುವವರ ವಿರುದ್ಧ ಸರ್ಕಾರದ ಕಠಿಣ ಕ್ರಮಗಳೇನು: ಇದರಿಲ್ಲಿ ಸರ್ಕಾರಿ ನೌಕರರುಗಳು ಭಾಗಿಯಾಗಿದ್ದಲ್ಲಿ ಅವರುಗಳ ವಿರುದ್ಧ ಕೈಗೊಂಡ ಕ್ರಮಗಳೇನು: (ವಿವರ ನೀಡುವುದು) | **2.** ಹಡಗಲಿ ತಾಲ್ಲೂಕು, ದಾಸರಹಳ್ಳಿ ಗ್ರಾಮದ ಜಮೀನಿನ ಸರ್ವೆ ನಂಬರ್-229/ಬಿ ರ ವಿ-3.28, ಸರ್ವೆ ನಂಬರ್-229/ಡಿ/1 ರ ವಿ-2.10 ಎಕರೆ ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದಂತೆ , ಅನಧಿಕೃತವಾಗಿ ಮಂಜೂರಾತಿ ವಹಿಯಲ್ಲಿ ಸೇರ್ಪಡೆ ಮಾಡಿದ್ದು, ಸದರಿ ಆಧಾರದ ಮೇಲ ಪಹಣಿಯಲ್ಲಿ ನಮೂದಿಸಿ ಆದೇಶ ಹೊರಡಿಸಿ, ಭೂಮಿ ತಂತ್ರಾಂಶದಲ್ಲಿ ಕಾರಣ ಕರ್ತರಾದ ಅಧಿಕಾರಿಗಳ ವಿರುದ್ಧ(ಎಫ್.ಐ.ಆರ್.ಸಂಖ್ಯೆ-0068/2022)ನ್ನು ದಾಖಲಿಸಿ ದೂರು ನೀಡಲಾಗಿರುತ್ತದೆ. |
| ಈ | ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಈ ರೀತಿಯ ಪ್ರಕರಣಗಳು ಯಾವುದಾದರೂ ದಾಖಲಾಗಿವೆಯೇ? (ಇದ್ದಲ್ಲಿ, ಮಾಹಿತಿ ನೀಡುವುದು) | ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಇಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ.<br><br>ವಿಜಯನಗರ ಜಿಲ್ಲೆಗೆ ಸಂಬಂಧಿಸಿದಂತೆ ಈ ಕೆಳಕಂಡ ಪ್ರಕರಣ ದಾಖಲೆಯಾಗಿರುತ್ತದೆ.<br><br>1. ಹಡಗಲಿ ತಾಲ್ಲೂಕು, ದಾಸರಹಳ್ಳಿ ಗ್ರಾಮದ ಜಮೀನಿನ ಸರ್ವೆ ನಂಬರ್-229/ಬಿ ರ ವಿ-3.28, ಸರ್ವೆ ನಂಬರ್-229/ಡಿ/1 ರ ವಿ-2.10, ಸರ್ವೆ ನಂಬರ್:229/ಡಿ/1 ರ ವಿ:4.98 ಎಕರೆ ಸರ್ಕಾರಿ ಜಮೀನಾಗಳಾಗಿದ್ದು, ಸದರಿ ಸರ್ಕಾರಿ ಜಮೀನುಗಳನ್ನು ಮಂಜೂರಾತಿ ವಹಿಯ ಆಧಾರದ ಮೇಲೆ ಪಹಣಿಯಲ್ಲಿ ನಮೂದಿಸಲು ಹಿಂದಿನ ಪ್ರಭಾರೆ ತಹಶೀಲ್ದಾರರಾದ ನಟರಾಜ-ಗ್ರೇಡ್-2 ಇವರು ಆದೇಶ ಹೊರಡಿಸಿ, ಭೂಮಿ ತಂತ್ರಾಂಶದಲ್ಲಿ ಪಹಣಿ ಇಂಡೀಕರಣಗೊಳಿಸಲು ಆದೇಶಿಸಿದ ಕುರಿತು ತಹಶೀಲ್ದಾರರು, ಹಡಗಲಿ ಇವರು ದಿನಾಂಕ:09-03-2022 ರಂದು ಅಕ್ರಮ-ಸಕ್ರಮ ಮಂಜೂರಾತಿ ವಹಿಯಲ್ಲಿ ಪಟ್ಟಾದಾರರ ಹೆಸರುಗಳನ್ನು ಅಕ್ರಮವಾಗಿ ನಮೂದು ಮಾಡಿರುತ್ತಾರೆಂದು ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ.<br><br>2. ಸದರಿ ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದಂತೆ, ಅಕ್ರಮ ಸಕ್ರಮ ಮಂಜೂರಾತಿ ವಹಿಯಲ್ಲಿ ಅಕ್ರಮವಾಗಿ ಪಟ್ಟಾದಾರರ ಹೆಸರುಗಳನ್ನು ನಮೂದು ಮಾಡಿರುವ ಕುರಿತು ಹಿಂದಿನ ಪ್ರಭಾರೆ ತಹಶೀಲ್ದಾರರಾದ ನಟರಾಜ-ಗ್ರೇಡ್-2 ರವರು ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಸದರಿ ವಿಷಯದ ಬಗ್ಗೆ ಕಡತ, ಮಂಜೂರಾತಿ ವಹಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ತನಿಖೆ ಮಾಡಿ ವರದಿ ಸಲ್ಲಿಸಲು ವಿಶೇಷ ಭೂ ಸ್ವಾಧೀನಾಧಿಕಾರಿಗಳು , ಸಿಂಗಟಾಲೂರು ಏತ ನೀರಾವರಿ ಯೋಜನೆ, ಹಗಡಲಿ ಇವರ ಅಧ್ಯಕ್ಷತೆಯಲ್ಲಿ ಇತರೆ ಅಧಿಕಾರಿಗಳು ಸೇರಿದಂತೆ ತಂಡವನ್ನು ರಚಿಸಿ ಈ |

ಕಾರ್ಯಾಲಯದಿಂದ ದಿನಾಂಕ:22-03-2023 ರಂದು ಆದೇಶಿಸಲಾಯಿತು.

3. ವಿಶೇಷ ಭೂ ಸ್ವಾಧೀನಾಧಿಕಾರಿಗಳು , ಸಿಂಗಟಾಲೂರು ಏತ ನೀರಾವರಿ ಯೋಜನೆ , ಹಗಡಲಿ ಇವರ ಅಧ್ಯಕ್ಷತೆಯಲ್ಲಿ ಹಾಗೂ ಇತರೆ ಅಧಿಕಾರಗಳನ್ನೊಳಗೊಂಡ ತಂಡವು ದಿನಾಂಕ:01-04-2022 ರಂದು ಸದರಿ ಪ್ರಕರಣದ ಕುರಿತು ಈ ಕಾರ್ಯಾಲಯಲಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ.

- ಸದರಿ ವರದಿಯಲ್ಲಿ ಹಡಗಲಿ ತಾಲ್ಲೂಕು, ದಾಸರಹಳ್ಳಿ ಗ್ರಾಮದ ಜಮೀನಿನ ಸರ್ವೆ ನಂಬರ್-229/ಬಿ ರ ವಿ-3.28 ರ ಜಮೀನಿಗೆ ಗೌರಿ ಬಾಯಿ ಗಂಡ ಭೀಮಾನಾಯ್ಕ , ಸರ್ವೆ ನಂಬರ್-229/ಡಿ/1 ರ ವಿ-2.10 ರ ಜಮೀನಿಗೆ ಕೊಟ್ರಿಬಾಯಿ ಗಂಡ ಗೋಪಿನಾಯ್ಕ.ಎಲ್.ಯು, ಸರ್ವೆ ನಂಬರ್:229/ಡಿ/1 ರ ವಿ:4.98 ಎಕರೆ ಜಮೀನಿಗೆ ವಿಶಾಲಬಾಯಿ ಗಂಡ ಶ್ರೀಧರನಾಯ್ಕ ಇವರ ಹೆಸರುಗಳು ಭೂ ಮಂಜೂರಾತಿ ವಹಿಯಲ್ಲಿ ದಿನಾಂಕ:15-07-1999 ರಂದು ಅರ್ಜಿ ಸಲ್ಲಿಸಿದಂತೆ ದಾಖಲೆ ಸೃಷ್ಟಿಸಿ ಭೂ ಮಂಜೂರಾತಿ ವಹಿಯಲ್ಲಿ ಅನಧಿಕೃತವಾಗಿ ಸೇರ್ಪಡೆ ಮಾಡಲಾಗಿರುತ್ತದೆ.

4. ಸದರಿ ಪ್ರಕರಣದಲ್ಲಿ ತನಿಖಾ ತಂಡದಿಂದ ವರದಿಯನ್ನು ಆಧಾರಿಸಿ ಈ ಕೆಳಕಂಡ ಅಧಿಕಾರಿಗಳು ಹಾಗೂ ಸಿಬ್ಬಂದಿಯ ವಿರುದ್ಧ ಕರ್ನಾಟಕ ಭೂ ಕಂದಾಯ ಅಧಿನಿಯಮಗಳು 1964 ರ ನಿಯಮ 192-ಎ ರನ್ವಯ ಪ್ರಕರಣಕ್ಕೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ದಿನಾಂಕ:05-05-2022 ರಂದು ಹಡಗಲಿ ಪೊಲೀಸ್ ಠಾಣೆಯಲ್ಲಿ ಸಂಖ್ಯೆ-0068/2022 ರಲ್ಲಿ F.I.R ದಾಖಲಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ವಯ ಈ ಕೆಳಗಿನಂತೆ ಕ್ರಮ/ಶಿಫಾರಸ್ಸು ಮಾಡಿ ವರದಿಯನ್ನು ಸಲ್ಲಿಸಲಾಗಿರುತ್ತದೆ.

| **ಕ್ರ. ಸಂ** | **ಅಧಿಕಾರಿ/ ಸಿಬ್ಬಂದಿಯ ಹೆಸರು** | **ಕಾರ್ಯನಿರ್ವಹಿಸಲಾದ ಹುದ್ದೆ** | **ಷರಾ** |
|---|---|---|---|
| 1 | ನಟರಾಜ | ತಹಶೀಲ್ದಾರರು ಗ್ರೇಡ್ -2 (ನಿಯಮ-32) ಹಡಗಲಿ ಹಾಗೂ ಪ್ರಭಾರೆ ತಹಶೀಲ್ದಾರರು | ಸದರಿ ಪ್ರಕರಣದಲ್ಲಿ ಭಾಗಿಯಾಗಿರುವುದರಿಂದ ಸದರಿ ಅಧಿಕಾರಿಯನ್ನು ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ಭೂ ಮಂಜೂರಾತಿ ಮಾಡಿ ಹಕ್ಕು ಬದಲಾವಣೆಗೆ ಕ್ರಮವಹಿಸಿರುವುದು ಸ್ಪಷ್ಟವಾಗಿ ಕಂಡುಬಂದಿರುವುದರಿಂದ ನಿಯಮಾನುಸಾರ ಶಿಸ್ತು ಕ್ರಮಕೈಗೊಳ್ಳಲು ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ:ಕಂ:ಇ.ಎಸ್.ಟಿ-:2/19/2021-22 ದಿನಾಂಕ:26-04-2022 ರಂದು |

| | | | | | |
|---|---|---|---|---|---|
| | | | | | ಸರ್ಕಾರಕ್ಕೆ ವರದಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ವರದಿಯನ್ನು ಸಲ್ಲಿಸಲಾಗಿರುತ್ತದೆ.<br>ಈ ಹಿನ್ನಲೆಯಲ್ಲಿ ದಿನಾಂಕ:06-06-2023 ರಂದು ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರು ಸದರಿ ಅಧಿಕಾರಿಯ ವಿರುದ್ಧ ದೋಷಾರೋಪಣ ಪಟ್ಟಿ, ಮೂಲ/ದೃಢೀಕೃತ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಿರುತ್ತಾರೆ. ಅದರನ್ವಯ ಕ್ರಮಕೈಗೊಳ್ಳಲಾಗುತ್ತಿದೆ. |

| ಕ್ರ. ಸಂ | ಅಧಿಕಾರಿ/ ಸಿಬ್ಬಂದಿಯ ಹೆಸರು | ಕಾರ್ಯ ನಿರ್ವಹಿಸಲಾದ ಹುದ್ದೆ | ಷರಾ |
|---|---|---|---|
| 1 | ಮಹಮ್ಮದ್ ಗೌಸ್ | ಶಿರಸ್ತೇದಾರರು , ಹಡಗಲಿ ತಾಲ್ಲೂಕು, ಕಛೇರಿ | ಸದರಿ ಪ್ರಕರಣದಲ್ಲಿ ಭಾಗಿಯಾಗಿರುವುದರಿಂದ ಸದರಿ ಅಧಿಕಾರಿಯನ್ನು ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ಭೂ ಮಂಜೂರಾತಿ ಮಾಡಿ ಹಕ್ಕು ಬದಲಾವಣೆಗೆ ಕ್ರಮವಹಿಸಿರುವುದು ಸ್ಪಷ್ಟವಾಗಿ ಕಂಡುಬಂದಿರುವುದರಿಂದ ನಿಯಮಾನುಸಾರ ಶಿಸ್ತು ಕ್ರಮಕೈಗೊಳ್ಳಲು ದಿನಾಂಕ: 26-04-2022 ರಂದು ಪ್ರಾದೇಶಿಕ ಆಯುಕ್ತರು, ಕಲಬುರಗಿ ಇವರಿಗೆ ವರದಿಯನ್ನು ಸಲ್ಲಿಸಲಾಗಿರುತ್ತದೆ.<br><br>ದಿನಾಂಕ:29.06.2022 ರಂದು ಮಾನ್ಯ ಪ್ರಾದೇಶಿಕ ಆಯುಕ್ತರು, ಕಲಬುರಗಿ ಇವರು ಸದರಿ ಅಧಿಕಾರಿಯನ್ನು ಕೂಡ್ಲಿಗಿ ತಾಲ್ಲೂಕು ಕಛೇರಿಯಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ ಆಡಳಿತಾತ್ಮಕ ದೃಷ್ಟಿಯಿಂದ ಸದರಿ ನೌಕರರನ್ನು ಕೂಡ್ಲಿಗಿ ತಾಲ್ಲೂಕು ಕಛೇರಿಗೆ ನಿಯೋಜಿಸಿ ಆದೇಶಿಸಿರುತ್ತಾರೆ. |

| ಕ್ರ. ಸಂ | ಅಧಿಕಾರಿ/ ಸಿಬ್ಬಂದಿಯ ಹೆಸರು | ಕಾರ್ಯನಿರ್ವಹಿಸಲಾದ ಹುದ್ದೆ | ಷರಾ |
|---|---|---|---|
| 1 | ಪುನೀತ್ | ಹಿಂದಿನ ವಿಷಯ ನಿರ್ವಾಹಕರು ಹಾಗೂ ಪ್ರ.ದ.ಸ ತಾಲ್ಲೂಕು ಕಛೇರಿ ಹಡಗಲಿ | ಸದರಿ ಪ್ರಕರಣದಲ್ಲಿ ಭಾಗಿಯಾಗಿರುವುದರಿಂದ ಸದರಿ ಅಧಿಕಾರಿಯನ್ನು ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ಭೂ ಮಂಜೂರಾತಿ ಮಾಡಿ ಹಕ್ಕು ಬದಲಾವಣೆಗೆ ಕ್ರಮವಹಿಸಿರುವುದು ಸ್ಪಷ್ಟವಾಗಿ ಕಂಡುಬಂದಿರುವುದರಿಂದ ಜಿಲ್ಲಾಧಿಕಾರಿಗಳ ನಡವಳಿ ಸಂಖ್ಯೆ:ಕಂ:ಇ.ಎಸ್.ಟಿ-2/19/2021-22 ದಿನಾಂಕ: 26-04-2022 ರಂದು ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ, ಅಪೀಲು) ನಿಯಮಗಳು 1957 ರ ನಿಯಮ 10(ಡಿ) ರಡಿಯಲ್ಲಿ ಇಲಾಖಾ ವಿಚಾರಣಾ ಬಾಕಿ ಇರಿಸಿ, ಅಮಾನತ್ತುಗೊಳಿಸಿ, ಲೀನ್ ಅವಧಿಯನ್ನು ಕೂಡ್ಲಿಗಿ ತಾಲ್ಲೂಕು ಕಛೇರಿಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ.<br><br>ದಿನಾಂಕ:15-09-2022 ರಂದು ಜಿಲ್ಲಾಧಿಕಾರಿಗಳು, ವಿಜಯನಗರ ಇವರು ಸದರಿ ನೌಕರರನನ್ನು ಅಮಾನತ್ತಿನಿಂದ ತೆರವುಗಳಿಸಿ, ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ, ಅಪೀಲು) ನಿಯಮಗಳು 1957 ರ ನಿಯಮ 11(2) ರಂತೆ ವಿಚಾರಣೆ ಬಾಕಿ ಇರಿಸಿ, ಹರಪನಹಳ್ಳಿ ತಾಲ್ಲೂಕು ಕಛೇರಿಗೆ ಪುನರ್ ಸ್ಥಾಪಿಸಿ ಆದೇಶಿಸಿದೆ. |

| ಕ್ರ. ಸಂ | ಅಧಿಕಾರಿ/ ಸಿಬ್ಬಂದಿಯ ಹೆಸರು | ಕಾರ್ಯನಿರ್ವಹಿಸ ಲಾದ ಹುದ್ದೆ | ಷರಾ |
|---|---|---|---|
| 1 | ಸಿ.ಎಂ.ಕೊಟ್ರೇಶ್ | ಪ್ರಭಾರ ಕಂದಾಯ ನಿರೀಕ್ಷರು, ಹಿರೇ ಹಡಗಲಿ ಹಾಗೂ ಗ್ರಾಮ ಆಡಳಿತಾಧಿಕಾರಿಗಳು, ದಾಸರಳ್ಳಿ ಗ್ರಾಮ. | ಸದರಿ ಪ್ರಕರಣದಲ್ಲಿ ಭಾಗಿಯಾಗಿರುವುದರಿಂದ ಸದರಿ ಅಧಿಕಾರಿಯು ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ಭೂ ಮಂಜೂರಾತಿ ಮಾಡಿ ಹಕ್ಕು ಬದಲಾವಣೆಗೆ ಕ್ರಮವಹಿಸಿರುವುದು ಸ್ಪಷ್ಟವಾಗಿ ಕಂಡುಬಂದಿರುವುದರಿಂದ ಜಿಲ್ಲಾಧಿಕಾರಿಯವರ ನಡವಳಿ ಸಂಖ್ಯೆ: ಕಂಇ.ಎಸ್.ಟಿ-2/19/21-22, ದಿನಾಂಕ:26.04.2022ರಂದು ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ, ಅಪೀಲು) ನಿಯಮಗಳು 1957ರ ನಿಯಮ 10(ಡಿ) ರಡಿಯಲ್ಲಿ ಇಲಾಖಾ ವಿಚಾರಣೆ ಬಾಕಿ ಇರಿಸಿ, ಅಮಾನತ್ತುಗೊಳಿಸಿ ಆದೇಶಿಸಲಾಗಿರುತ್ತದೆ.<br><br>ದಿನಾಂಕ:15.09.2022 ರಂದು ಜಿಲ್ಲಾಧಿಕಾರಿಗಳು, ವಿಜಯನಗರ ಇವರು ಸದರಿ ನೌಕರರನ್ನು ಅಮಾನತ್ತಿನಿಂದ ತೆರವುಗೊಳಿಸಿ ಕರ್ನಾಟಕ ಸಿವಿಲ್ ಸೇವಾ(ವರ್ಗೀಕರಣ, ನಿಯಂತ್ರಣ, ಅಪೀಲು) ನಿಯಮಗಳು 1957ರ ನಿಯಮ 11(2)ರಂತೆ ವಿಚಾರಣೆ ಬಾಕಿ ಇರಿಸಿ ಹೊಸಪೇಟೆ ತಾಲ್ಲೂಕಿನ, ಬ್ಯಾಲಕುಂದಿ ಗ್ರಾಮ ವೃತ್ತಕ್ಕೆ ಸೇವೆಯಲ್ಲಿ ಪುನರ್ ಸ್ಥಾಪಿಸಿ ಆದೇಶಿಸಿದೆ. |

| ಕ್ರ. ಸಂ | ಅಧಿಕಾರಿ/ ಸಿಬ್ಬಂದಿಯ ಹೆಸರು | ಕಾರ್ಯನಿರ್ವಹಿಸಲಾದ ಹುದ್ದೆ | ಷರಾ |
|---|---|---|---|
| 1 | ಸಿ.ಎಂ.ಕೊಟ್ರೇಶ್ | ಪ್ರಭಾರ ಕಂದಾಯ ನಿರೀಕ್ಷರು, ಹಿರೇ ಹಡಗಲಿ ಹಾಗೂ ಗ್ರಾಮ ಆಡಳಿತಾಧಿಕಾರಿಗಳು, ದಾಸರಳ್ಳಿ, ಗ್ರಾಮ. | ಹೆಚ್. ಪುನೀತ್ , ಪ್ರದಸ ಹಾಗೂಸಿ.ಎಂ. ಕೊಟ್ರೇಶ್ ಗ್ರಾಮ ಆಡಳಿತಾಧಿಕಾರಿಗಳು, ಇವರುಗಳಿಗೆ ದಿನಾಂಕ:04.02.2023ರಂದು ಪ್ರಕರಣದಲ್ಲಿ ಕರ್ನಾಟಕ ನಾಗರೀಕ ಸೇವಾ(ಸಿ.ಸಿ.ಎ) 1957ರ ನಿಯಮ 11(2)ರನ್ವಯ ಅಪರ ಜಿಲ್ಲಾಧಿಕಾರಿಗಳನ್ನು ವಿಚಾರಣಾ ಅಧಿಕಾರಿಯನ್ನಾಗಿ ತಹಶೀಲ್ದಾರರು, ಕೊಟ್ಟೂರು ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಆದೇಶಿಸಲಾಗಿರುತ್ತದೆ. |

**ಆರ್‌ಡಿ 28 ಎಲ್‌ಜಿಇ 2023**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು